

بسم اللهِ الرّحمٰن الرّحيم

ಹಝ್ರತ್ ಪೈಗಂಬರ್(ಸ)ರ ಸರಳ ಜೀವನ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**(ಅಯ್ಯದಹುಲ್ಲಾಹ್), ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **30-10-2026** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

(ತಶಹ್ಹುದ್, ತಅವ್ವುಝ್, ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್, ಹೀಗೆ ಹೇಳಿದರು:)

ಹಝ್ರತ್ ಪೈಗಂಬರ್(ಸ)ರ ಸರಳ ಬದುಕು ಮತ್ತು ಸರಳ ಜೀವನಶೈಲಿಯ ಬಗ್ಗೆ ಪ್ರಸ್ತಾಪಿಸಲಾಗುತ್ತಿತ್ತು. ಕಳೆದ ವಾರ ಈ ನಿಟ್ಟಿನಲ್ಲಿ ನಬಿ(ಸ)ರ ಆಹಾರ-ಪಾನೀಯಗಳ ಸರಳತೆ ಮತ್ತು ತಿನ್ನುವ-ಕುಡಿಯುವ ವಿಧಾನದ ಬಗ್ಗೆ ವಿವರಿಸಿದ್ದೆ ಹಾಗೂ ನಬಿ(ಸ)ರ ಸರಳ ಜೀವನದ ಗುಣಮಟ್ಟ ಹೇಗಿತ್ತು ಎಂಬುದನ್ನು ತಿಳಿಸಿದ್ದೆ.

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ನಬಿ(ಸ)ರ ಪ್ರತಿಯೊಂದು ಕಾರ್ಯದಲ್ಲೂ ಸರಳತೆ ಮತ್ತು ಸಹಜತೆಯ ಬಣ್ಣವಿತ್ತು. ನಬಿ(ಸ) ಅತ್ಯುತ್ತಮವಾದ ಊಟವನ್ನು ತಿನ್ನುತ್ತಿದ್ದಿರಬೇಕು ಮತ್ತು ರಾಜರಂತಹ ಊಟದ ಮೇಜು ಅವರ ಮುಂದೆ ಹಾಸಲ್ಪಡುತ್ತಿರಬೇಕು' ಎಂದು ರುಚಿಕರವಾದ ಊಟವನ್ನು ತಿನ್ನುವ ಅಭ್ಯಾಸವುಳ್ಳವರು ಭಾವಿಸುತ್ತಿರಬಹುದು. ಆದರೆ ನಿಜಸ್ಥಿತಿ ಇದಕ್ಕೆ ವಿರುದ್ಧವಾಗಿತ್ತು ಎಂಬುದನ್ನು ತಿಳಿದು ಅವರು ಆಶ್ಚರ್ಯಪಡುವರು. ಒಂದೆಡೆ ರಸೂಲುಲ್ಲಾಹ್(ಸ) ಸರಳತೆಯ ಪರಿಪೂರ್ಣ ಮಾದರಿಯಾಗಿದ್ದರೆ, ಇನ್ನೊಂದೆಡೆ ಸರಳ ಜೀವನದಲ್ಲೂ ಅವರು ಲೋಕಕ್ಕೆ ಮಾದರಿಯಾಗಿದ್ದರು.

ಹಝ್ರತ್ ಆಯಿಶಾ(ರ) ತಮ್ಮ ಅಕ್ಕನ ಪುತ್ರ ಉರ್ವಾರೊಡನೆ ಹೀಗೆ ಹೇಳಿದರು: "ಹೇ ನನ್ನ ಸೋದರಳಿಯ, ನಾವಂತೂ ಅಮಾವಾಸ್ಯೆಯ ನಂತರ ಅಮಾವಾಸ್ಯೆಯನ್ನು ನೋಡುತ್ತಿದ್ದೆವು, ಎಷ್ಟರಮಟ್ಟಿಗೆಂದರೆ ಮೂರು ಅಮಾವಾಸ್ಯೆಗಳನ್ನು ನೋಡುತ್ತಿದ್ದೆವು. ಅಂದರೆ ಎರಡು ಚಂದ್ರ ಮಾಸಗಳು ಕಳೆದುಹೋಗುತ್ತಿದ್ದವು, ಆದರೆ ನಬಿ(ಸ)ರ ಮನೆಯಲ್ಲಿ ಬೆಂಕಿ ಉರಿಯುತ್ತಿರಲಿಲ್ಲ." "ಹಾಗಾದರೆ ನೀವು ಏನು ತಿನ್ನುತ್ತಿದ್ದಿರಿ?" ಎಂದು ಕೇಳಲಾಯಿತು. ಹಝ್ರತ್ ಆಯಿಶಾ(ರ) ಹೀಗೆ ಉತ್ತರಿಸಿದರು: "ನೀರು ಮತ್ತು ಖರ್ಜೂರವನ್ನು ತಿನ್ನುತ್ತಿದ್ದೆವು ಮತ್ತು ಆಡಿನ ಹಾಲನ್ನು ನೆರೆಹೊರೆಯ ಅನ್ಸಾರಿ ಕಳುಹಿಸುತ್ತಿದ್ದರು."

ಅಲ್ಲಾಹ್! ಅಲ್ಲಾಹ್! ಎಂತಹ ಸರಳ ಜೀವನ; ಎರಡೆರಡು ತಿಂಗಳುಗಳ ವರೆಗೆ ಬೆಂಕಿಯೇ ಉರಿಯುತ್ತಿರಲಿಲ್ಲ ಮತ್ತು ಕೇವಲ ಖರ್ಜೂರ, ನೀರು ಮತ್ತು ಹಾಲಿನ ಮೇಲೆ ಜೀವನ ಸಾಗುತ್ತಿತ್ತು. ಈ ಚರಿತ್ರೆಯನ್ನು ಓದಿ ಮುಸ್ಲಿಮರು ನಾಚಿಕೆಪಡಬೇಕು. ಇಂದು ಮುಸಲ್ಮಾನರಲ್ಲೂ ತಿನ್ನುವ-ಕುಡಿಯುವ ರೋಗಕ್ಕೆ ತುತ್ತಾಗಿರುವ ಕೆಲವು ಶ್ರೀಮಂತರಿದ್ದಾರೆ. ಅವರನ್ನು ನೋಡಿ ಕಡಿಮೆ ಆದಾಯವುಳ್ಳವರು ಕೂಡ ಹೆಚ್ಚು ಖರ್ಚು ಮಾಡಲು ಪ್ರಯತ್ನಿಸುತ್ತಾರೆ. ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: "ಮುಸ್ಲಿಮರ ಹಣವು ತಿನ್ನುವ-ಕುಡಿಯುವುದರಲ್ಲೇ ಹೆಚ್ಚು ಖರ್ಚಾಗಿ ಬಿಡುತ್ತದೆ ಮತ್ತು ಸಾಲಗಾರರಾಗಿಯೇ ಇರುತ್ತಾರೆ."

(ಹುಝೂರ್ ಹೇಳಿದರು:) 'ನಮ್ಮ ಆಹಾರದ ಗುಣಮಟ್ಟ ಉತ್ತಮವಾಗಿಲ್ಲ' ಎಂದು ಇತ್ತೀಚಿನ ದಿನಗಳಲ್ಲಿ ಬೇಡಿಕೆಗಳು ಹೆಚ್ಚಾಗುತ್ತಿವೆ. ವಾಸ್ತವದಲ್ಲಿ ಇದ್ದಷ್ಟು ಆದಾಯದಲ್ಲಿ ಜೀವನ ಸಾಗಿಸಬೇಕು. ನಬಿ(ಸ) ಒಂದೆಡೆ ಸರಳತೆಯ ಮಾದರಿಯಾಗಿದ್ದರೆ, ಇನ್ನೊಂದೆಡೆ ಸನ್ಯಾಸಿ ಆಗಿ ಇರುವುದನ್ನು ಸಹ ಇಷ್ಟಪಡುತ್ತಿರಲಿಲ್ಲ. ಅತ್ಯುತ್ತಮವಾದ ಆಹಾರವನ್ನು ಸಹ ಸೇವಿಸುತ್ತಿದ್ದರು. ಆತ್ಮ ನಿಗ್ರಹದ ಉದ್ದೇಶದಿಂದ ಊಟವನ್ನು ನಿರಾಕರಿಸುತ್ತಿರಲಿಲ್ಲ. ನಬಿ(ಸ)ರಿಗೆ ಇತರರಿಗಿಂತ ಶ್ರೇಷ್ಠತೆಯನ್ನು ನೀಡುವ ಗುಣಮಟ್ಟ ಇದೇ ಆಗಿದೆ. ಏಕೆಂದರೆ ನಬಿ(ಸ) ಇಡೀ ಲೋಕಕ್ಕಾಗಿ ಆಗಮಿಸಿದರು. ಯಾವುದೇ ನಿರ್ದಿಷ್ಟ ಗುಂಪಿಗಾಗಿ ಮಾತ್ರ ಆಗಮಿಸಿರಲಿಲ್ಲ. ಆದುದರಿಂದ ನಬಿ(ಸ) ಪರಿಪೂರ್ಣರಾಗಿ ಇರಲೇ ಬೇಕಿತ್ತು. ಒಂದೆಡೆ ನಬಿ(ಸ) ಸರಳ ಜೀವನದಲ್ಲಿ ಪರಿಪೂರ್ಣತೆಯನ್ನು ಹೊಂದಿದ್ದರೆ, ಮತ್ತೊಂದೆಡೆ ಶುದ್ಧವಾದ ವಸ್ತುಗಳ ಬಳಕೆಯಿಂದ ಹಿಂದೆ ಸರಿಯುತ್ತಿರಲಿಲ್ಲ. ಆದರೆ ಸಾಮಾನ್ಯವಾಗಿ ನಬಿ(ಸ) ಜೀವನವು ಸರಳವಾಗಿರುತ್ತಿತ್ತು. ಜೀವ ಉಳಿಸಲು ಹಾಗೂ ಕೆಲಸ ಮಾಡುವ ಶಕ್ತಿ ಉಂಟಾಗಲು ಮಾತ್ರ ಊಟವನ್ನು ಮಾಡುತ್ತಿದ್ದರು.

ನಬಿ(ಸ) ತಮ್ಮ ಜೀವನದಲ್ಲಿ ಎಲ್ಲ ರೀತಿಯ ಅತ್ಯುತ್ತಮ ಆಹಾರಗಳನ್ನು ಸಹ ಬಳಸಿ ಮಾದರಿಯನ್ನು ತೋರಿಸಿದರು; ಇನ್ನೊಂದೆಡೆ ಜೀವನದ ಅಂತಿಮ ಗುರಿ ಅತ್ಯುತ್ತಮ ಆಹಾರ ಸೇವಿಸುವುದು ಮತ್ತು ಉಡುಪು ಧರಿಸುವುದು ಎಂದು ಭಾವಿಸಿರುವ ಶ್ರೀಮಂತರಿಗೂ ನಬಿ(ಸ) ಸರಳ ಜೀವನದ ಮೂಲಕ ಮಾದರಿಯನ್ನು ಸ್ಥಾಪಿಸಿದರು.

ಉತ್ತಮ ಆಹಾರವನ್ನು ಸೇವಿಸುವುದರ ಕುರಿತು ಒಂದು ವರದಿಯಿದೆ. ರಸೂಲುಲ್ಲಾಹ್(ಸ) ಮೇಕೆಯ ತೋಳಿನ ಮಾಂಸವನ್ನು ತಿನ್ನುತ್ತಿದ್ದರು. ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಒಮ್ಮೆ ರಸೂಲುಲ್ಲಾಹ್(ಸ) ಚೂರಿಯಿಂದ ಮಾಂಸವನ್ನು ತುಂಡು ಮಾಡಿ ತಿಂದರು. ಅನುಯಾಯಿಗಳಿಗೆ ತೊಂದರೆಯಾಗದಿರಲಿ ಎಂಬ ಕಾರಣಕ್ಕಾಗಿ ಹೀಗೆ ಮಾಡಿ ತೋರಿಸಿದರು. ಅಗತ್ಯವಿದ್ದರೆ ಈ ರೀತಿ ತಿನ್ನುವುದು ಸಮ್ಮತವಾಗಿದೆ. ಆದರೆ ಇದಕ್ಕೆ ಬದ್ಧರಾಗುವುದು, ಔಪಚಾರಿಕತೆ ತೋರುವುದು ಮತ್ತು ಇತರ ವಿಧಾನಗಳನ್ನು ಕೀಳಾಗಿ ಕಾಣುವುದು ಸರಿಯಲ್ಲ. ಇತರ ಸಮುದಾಯಗಳನ್ನು ಅನುಸರಿಸಲು ತೊಡಗಿದರೆ, ಮನುಷ್ಯನು ಶೌಚ ಮಾಡುವುದನ್ನು ಬಿಟ್ಟುಬಿಡುತ್ತಾನೆ. ಹಝ್ರತ್ ಮಸೀಹ್ ಮೌಊದ್(ಅ) ಕೆಲವೊಮ್ಮೆ ಕೆಲಸ ಮಾಡುತ್ತಿರುವಾಗ ಮೇಜಿನ ಮೇಲೂ ತಿನ್ನುತ್ತಿದ್ದರು, ನೆಲದ ಮೇಲೆ ಕುಳಿತು ಕೂಡ ತಿನ್ನುತ್ತಿದ್ದರು.

ನಬಿ(ಸ)ರ ವಿವಾಹ ಮತ್ತು ವಲೀಮಾ ಕುರಿತು ವರದಿ ಇದೆ. ನಬಿ(ಸ) ಹಝ್ರತ್ ಸಫಿಯಾ(ರ)ರನ್ನು ಸ್ವತಂತ್ರಗೊಳಿಸಿ, ಅವರನ್ನು ವಿವಾಹವಾದರು. ಅವರು ಸ್ವತಂತ್ರರಾಗುವುದೇ ಅವರ ಮಹರ್ ಆಗಿತ್ತು. ಅದೇ ಪ್ರಯಾಣದ ಸಮಯದಲ್ಲಿ ನಬಿ(ಸ) ಬೆಳಿಗ್ಗೆ ಊಟದ ಬಟ್ಟೆ ಹಾಸಿದರು ಮತ್ತು ಎಲ್ಲರೊಡನೆ ಹೀಗೆ ಹೇಳಿದರು: 'ಯಾರ ಬಳಿ ಏನು ಇದೆಯೋ ಅದನ್ನು ತನ್ನಿರಿ.' ಕೆಲವರು ಖರ್ಜೂರಗಳನ್ನು ತಂದರು, ಕೆಲವರು ತುಪ್ಪವನ್ನು ತಂದರು, ಕೆಲವರು ಹುರಿದ ಧಾನ್ಯದ ಹಿಟ್ಟನ್ನು ತಂದರು. ನಂತರ ಇವೆಲ್ಲವನ್ನು ಒಟ್ಟಿಗೆ ಬೆರೆಸಿ ನಾದಿದರು. ಇದೇ ರಸೂಲುಲ್ಲಾಹ್(ಸ)ರ ವಲೀಮಾ ಆಗಿತ್ತು.

ನಬಿ(ಸ) ಪ್ರತಿಯೊಬ್ಬರ ಆಮಂತ್ರಣವನ್ನು ಕೂಡ ಸ್ವೀಕರಿಸುತ್ತಿದ್ದರು. ಹಝ್ರತ್ ಅನಸ್(ರ) ವರದಿ ಮಾಡುತ್ತಾರೆ: ಒಬ್ಬ ದರ್ಜಿ ರಸೂಲುಲ್ಲಾಹ್(ಸ)ರನ್ನು ಆಮಂತ್ರಿಸಿದರು. ಅನಸ್(ರ) ಹೇಳುತ್ತಾರೆ: "ನಾನು ಕೂಡ ರಸೂಲುಲ್ಲಾಹ್(ಸ)ರೊಂದಿಗೆ ಔತಣಕ್ಕೆ ಹೋದೆ. ಅವನು ರಸೂಲುಲ್ಲಾಹ್(ಸ)ರಿಗೆ ಬಾರ್ಲಿಯ ರೊಟ್ಟಿ ಮತ್ತು ಸಾರು ನೀಡಿದನು, ಅದರಲ್ಲಿ ಸೋರೆಕಾಯಿ ಮತ್ತು ಒಣ ಮಾಂಸದ ತುಂಡುಗಳಿದ್ದವು." "ನಬಿ(ಸ) ಬಟ್ಟಲಿನ ಸುತ್ತಲಿನಿಂದ ಸೋರೆಕಾಯಿಯನ್ನು ಆಯ್ದು ತಿನ್ನುತ್ತಿರುವುದನ್ನು ನಾನು ನೋಡಿದೆ. ಅಂದಿನಿಂದ ನಾನು ಸಹ ಸೋರೆಕಾಯಿಯನ್ನು ಇಷ್ಟಪಡಲು ಆರಂಭಿಸಿದೆ."

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಸೋರೆಕಾಯಿ ನಬಿ(ಸ)ರಿಗೆ ಬಹಳ ಇಷ್ಟವಾಗಿತ್ತು. ಆದರೆ ನಬಿ(ಸ)ರಿಗೆ ಊಟವೂ ಲಭಿಸದ ಸಮಯವೂ ಬಂದಿತ್ತು. 'ಮುಹಮ್ಮದ್ ರಸೂಲುಲ್ಲಾಹ್(ಸ) ರುಚಿಕರವಾದ ಮಾಂಸವನ್ನೇಕೆ ತಿಂದರು, ರುಚಿಕರವಾದ ಮತ್ತು ಉತ್ತಮ ಶರಬತ್ತುಗಳನ್ನೇಕೆ ಕುಡಿದರು, ಅತ್ಯುತ್ತಮ ಆಹಾರ ವಸ್ತುಗಳನ್ನು ಏಕೆ ತಿಂದರು' ಎಂದು ಕೇಳುವವನು ಮೂರ್ಖನಾಗಿದ್ದಾನೆ. ಏಕೆಂದರೆ, ಮುಹಮ್ಮದ್ ರಸೂಲುಲ್ಲಾಹ್(ಸ) ಹಸಿವಿನಿಂದ ಕೂಡ ಇರುತ್ತಿದ್ದರು ಮತ್ತು ಹಸಿವಿನ ಕಾರಣ ತಮ್ಮ ಹೊಟ್ಟೆಗೆ ಪಟ್ಟಿಯನ್ನು ಕೂಡ ಕಟ್ಟಿಕೊಳ್ಳುತ್ತಿದ್ದರು ಎಂಬುದು ಆತನಿಗೆ ಗೊತ್ತಿಲ್ಲ. ನಬಿ(ಸ) ಬಹಳ ಕಷ್ಟದ ದಿನಗಳನ್ನು ಕೂಡ ಕಳೆದಿದ್ದರು. ಹಝ್ರತ್ ಆಯಿಶಾ(ರ) ಹೇಳುತ್ತಾರೆ: ಒಮ್ಮೆ ಬಡ ಮಹಿಳೆಯೊಬ್ಬಳು ನಬಿ(ಸ)ರ ಮನೆಗೆ ಬೇಡಿಕೊಂಡು ಬಂದಾಗ, ಆ ದಿನ ನಮ್ಮ ಮನೆಯಲ್ಲಿ ಏನೂ ಇರಲಿಲ್ಲ ಮತ್ತು ಹುಡುಕಿದಾಗ ಕೇವಲ ಒಂದು ಖರ್ಜೂರ ಮಾತ್ರ ಸಿಕ್ಕಿತು. ಆ ಮಹಿಳೆ ಆ ಖರ್ಜೂರವನ್ನು ಎರಡು ತುಂಡು ಮಾಡಿ ತನ್ನ ಇಬ್ಬರು ಹೆಣ್ಣುಮಕ್ಕಳಿಗೆ ನೀಡಿದಳು. ಹಝ್ರತ್ ಆಯಿಶಾ(ರ) ಈ ಘಟನೆಯನ್ನು ನಬಿ(ಸ)ರೊಡನೆ ಪ್ರಸ್ತಾಪಿಸಿದಾಗ, ಅವರು ಹೀಗೆ ಹೇಳಿದರು: "ಯಾರ ಮನೆಯಲ್ಲಿ ಇಬ್ಬರು ಹೆಣ್ಣುಮಕ್ಕಳಿದ್ದು, ಅವರು ಆ ಮಕ್ಕಳನ್ನು ಚೆನ್ನಾಗಿ ಬೆಳೆಸಿದರೆ, ಅಲ್ಲಾಹನು ಅವರಿಗೆ ಸ್ವರ್ಗವನ್ನು ಕಡ್ಡಾಯಗೊಳಿಸುತ್ತಾನೆ."

ನಬಿ(ಸ)ರ ಜೀವನ ಚರಿತ್ರೆಯನ್ನು ಯಾರಾದರೂ ಕೇಳುವಾಗ ಅಥವಾ ಓದುವಾಗ, ಅದರಲ್ಲಿ ವಿವರಿಸಲಾದ ಪ್ರತಿಯೊಂದು ಘಟನೆಯಲ್ಲೂ ತರಬೇತಿ, ಯುಕ್ತಿ ಮತ್ತು ಉಪದೇಶದ ಅನೇಕ ಆಯಾಮಗಳು ಗೋಚರಿಸುತ್ತವೆ, ಇದೇ ನಮಗೆ ಈ ವರದಿಯಲ್ಲಿ ಕಂಡುಬರುತ್ತಿದೆ. ಪವಿತ್ರ ಖುರ್'ಆನಿನ ವ್ಯಾಖ್ಯಾನ ಗ್ರಂಥದ ಮುನ್ನುಡಿಯಲ್ಲಿ ನಬಿ(ಸ)ರ ಜೀವನ ಚರಿತ್ರೆಯನ್ನು ವಿವರಿಸುತ್ತಾ ಹಝ್ರತ್ ಮುಸ್ಲಿಹ್ ಮೌಊದ್(ರ) ಹೀಗೆ ಹೇಳುತ್ತಾರೆ: ನಬಿ(ಸ) ಆಹಾರ ಮತ್ತು ಪಾನೀಯಗಳಲ್ಲಿ ಸರಳತೆಯನ್ನು ಅಳವಡಿಸಿಕೊಳ್ಳುತ್ತಿದ್ದರು. ಕೆಲವೊಮ್ಮೆ ಉಪ್ಪು ಹೆಚ್ಚಾದರೆ ಅಥವಾ ಕಡಿಮೆಯಾದರೆ, ಅಥವಾ ಪಾಕ ಮಾಡಿದ್ದು ಸರಿಯಾಗದಿದ್ದರೆ ಎಂದಿಗೂ ಅಸಮಾಧಾನ ವ್ಯಕ್ತಪಡಿಸುತ್ತಿರಲಿಲ್ಲ. ಸಾಧ್ಯವಾದಷ್ಟು ಅಂತಹ ಊಟವನ್ನೇ ತಿಂದು ಅಡುಗೆ ಮಾಡಿದವರ ಮನಸ್ಸಿಗೆ ನೋವಾಗದಂತೆ ನೋಡಿಕೊಳ್ಳುತ್ತಿದ್ದರು, ಇಷ್ಟವಾಗದಿದ್ದರೆ ತಿನ್ನುವುದನ್ನು ನಿಲ್ಲಿಸುತ್ತಿದ್ದರು. ಆದರೆ ಅದನ್ನು ವ್ಯಕ್ತಪಡಿಸುತ್ತಿರಲಿಲ್ಲ. ಯಾವುದಾದರೂ ಆಹಾರ ವಸ್ತು ಬಂದರೆ ಸಹಾಬಿಯರ ಜೊತೆ ಹಂಚಿ ತಿನ್ನುತ್ತಿದ್ದರು. ಒಮ್ಮೆ ಖರ್ಜೂರಗಳು ಬಂದಾಗ, ಸಹಾಬಿಯರಿಗೆ ತಲಾ ಏಳು ಖರ್ಜೂರಗಳನ್ನು ಹಂಚಿಕೊಟ್ಟರು.

ಹಝ್ರತ್ ಆಯಿಶಾ(ರ) ವಿವರಿಸುತ್ತಾರೆ: ನಬಿ(ಸ) ಯಾರನ್ನಾದರೂ ಬೈಯುವುದನ್ನು ನಾನು ಎಂದಿಗೂ ನೋಡಿಲ್ಲ. ನಬಿ(ಸ)ರಿಗೆ ಎಂದಿಗೂ ಯಾವುದೇ ಬಟ್ಟೆಯನ್ನು ಮಡಚಿ ಇಡಲಾಗುತ್ತಿರಲಿಲ್ಲ. ಅಂದರೆ, ಕೇವಲ ಒಂದು ಜೊತೆ ಬಟ್ಟೆ ಇರುತ್ತಿತ್ತು, ಮಡಚಿ

ಇಡಲು ಬೇರೆ ಬಟ್ಟೆಯಿರಲಿಲ್ಲ. ಬಟ್ಟೆಗಳನ್ನು ತೊಳೆಯುವುದು ಅವಶ್ಯಕವಾಗಿದ್ದರೆ, ಹಾಗೆಯೇ ತೊಳೆದು ಹೊರಗೆ ಬರುತ್ತಿದ್ದರು, ನೀರಿನ ಗುರುತುಗಳು ಅದರ ಮೇಲೆ ಕಾಣಿಸುತ್ತಿದ್ದವು.

ಇದು ಸರಳತೆಯ ಎಂತಹ ಮಾದರಿಯಾಗಿದೆ ಎಂದರೆ, ಇದನ್ನು ಯಾವುದೇ ಶ್ರೀಮಂತನಿಗೆ ತೋರಿಸಲು ಸಾಧ್ಯವಿಲ್ಲ ಮತ್ತು ಯಾರೂ ತೋರಿಸಿಯೂ ಇಲ್ಲ. ಹಝ್ರತ್ ಇಬ್ನು ಉಮರ್(ರ)ರಿಂದ ವರದಿಯಾಗಿದೆ: ಮಾರುಕಟ್ಟೆಯಲ್ಲಿ ಅತಾರಿದ್ ತಮೀಮಿ ಎಂಬಾತನು ಗೆರೆಗಳಿರುವ ರೇಷ್ಮೆ ಬಟ್ಟೆಯನ್ನು ಮಾರುತ್ತಿರುವುದನ್ನು ಹಝ್ರತ್ ಉಮರ್(ರ) ಕಂಡರು. ಆತನು ರಾಜರ ಬಳಿ ಹೋಗುವ ಮತ್ತು ಅವರಿಂದ ಬಹುಮಾನಗಳನ್ನು ಪಡೆಯುವ ವ್ಯಕ್ತಿಯಾಗಿದ್ದನು. ಆಗ ಹಝ್ರತ್ ಉಮರ್(ರ) ಹೀಗೆ ಹೇಳಿದರು: "ಯಾ ರಸೂಲಲ್ಲಾಹ್(ಸ), ಅತಾರಿದ್ ಇಂತಹ ಬಟ್ಟೆಯನ್ನು ಮಾರುತ್ತಿರುವುದನ್ನು ನಾನು ನೋಡಿದೆ. ಯಾವುದಾದರೂ ನಿಯೋಗಗಳು ನಿಮ್ಮ ಮುಂದೆ ಬರುವಾಗ ನೀವು ಅದನ್ನು ಧರಿಸಿದರೆ, ಅದರ ಉತ್ತಮ ಪ್ರಭಾವ ಬೀರುವುದು ಅಥವಾ ಶುಕ್ರವಾರದ ದಿನದಂದು ಧರಿಸಬಹುದಾಗಿದೆ." ನಬಿ(ಸ) ಹೇಳಿದರು: "ಪರಲೋಕದಲ್ಲಿ ಪಾಲು ಇಲ್ಲದವನು ಮಾತ್ರ ಈ ಲೋಕದಲ್ಲಿ ರೇಷ್ಮೆಯನ್ನು ಧರಿಸುತ್ತಾನೆ."

ಈ ಘಟನೆಗಳ ಪ್ರಸ್ತಾಪದ ನಂತರ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಉಡುಪಿನಲ್ಲಿ ನಬಿ(ಸ) ಎಷ್ಟೊಂದು ಸರಳತೆಯನ್ನು ತೋರುತ್ತಿದ್ದರೆಂದರೆ, ಸತ್ಯದಲ್ಲಿ ಈ ಸ್ಥಿತಿಯನ್ನು ಓದಿ ನನಗೆ ನಾಚಿಕೆಯಾಗುತ್ತದೆ. ಖಂಡಿತವಾಗಿಯೂ ಈಗ ಪರಿಸ್ಥಿತಿ ಬದಲಾಗಿದೆ, ಆದರೂ ಈ ಘಟನೆಗಳನ್ನು ಓದಿ ನಾಚಿಕೆಯಾಗುತ್ತದೆ. ಉಡುಪಿನ ವ್ಯತ್ಯಾಸವನ್ನು ತೆಗೆದುಹಾಕಿದರೆ ಕೂಡ, ನಬಿ(ಸ)ರ ಜೀವನವು ಅತ್ಯಂತ ಸರಳವಾಗಿತ್ತು ಮತ್ತು ಅದಿಲ್ಲದೆ ಲೋಕದ ಪ್ರಗತಿಯ ಸಾಧನಗಳು ಲಭಿಸಲು ಸಾಧ್ಯವಿರಲಿಲ್ಲ.

ಹಝ್ರತ್ ಸಮುರಾ ಬಿನ್ ಜುಂದುಬ್(ರ) ವರದಿ ಮಾಡುತ್ತಾರೆ: ನಬಿ(ಸ) ಹೀಗೆ ಹೇಳಿದರು, "ಬಿಳಿ ಬಟ್ಟೆಗಳನ್ನು ಧರಿಸಿರಿ, ಏಕೆಂದರೆ ಅವು ಹೆಚ್ಚು ಪವಿತ್ರ ಮತ್ತು ಉತ್ತಮವಾಗಿವೆ. ಇದರಲ್ಲಿಯೇ ನಿಮ್ಮ ಮೃತರಿಗೆ ಕಫನ್ ಮಾಡಿರಿ."

ಒಂದು ವರದಿಯಲ್ಲಿದೆ, ನಬಿ(ಸ) ಹೀಗೆ ಹೇಳಿದರು: ಮನುಷ್ಯನು ತನ್ನ ಹೊಟ್ಟೆಗಿಂತ ಕೆಟ್ಟದಾದ ಪಾತ್ರೆಯನ್ನು ಎಂದಿಗೂ ತುಂಬಿಲ್ಲ. ಮನುಷ್ಯನಿಗೆ ತನ್ನ ಬೆನ್ನನ್ನು ನೆಟ್ಟಗಿಡಲು ಕೆಲವು ತುತ್ತುಗಳಷ್ಟೇ ಸಾಕು. ಅಂದರೆ, ಹೊಟ್ಟೆಯೂ ಒಂದು ಪಾತ್ರೆಯಾಗಿದೆ, ಅದನ್ನು ತುಂಬಿಸುತ್ತಾ ಹೋದರೆ ಅದು ಕೇಡು ಆಗುತ್ತಾ ಹೋಗುವುದು. ನಬಿ(ಸ) ಹೇಳಿದರು: ಮೂರರಲ್ಲಿ ಒಂದು ಭಾಗವನ್ನು ಊಟಕ್ಕಾಗಿ ಇಟ್ಟುಕೊಳ್ಳಬೇಕು, ಒಂದು ಭಾಗವನ್ನು ನೀರಿಗಾಗಿ ಮತ್ತು ಒಂದು ಭಾಗವನ್ನು ಉಸಿರಾಟಕ್ಕಾಗಿ ಇಟ್ಟುಕೊಳ್ಳಬೇಕು. ಅಂದರೆ ಸ್ವಲ್ಪ ಹಸಿವು ಬಾಕು ಇರುವಾಗಲೇ ತಿನ್ನುವುದನ್ನು ನಿಲ್ಲಿಸಬೇಕು.

ಹೊಟ್ಟೆಯ ತೊಂದರೆಯಿರುವವರಿಗೆ ವೈದ್ಯರು ಇಂದು ನೀಡುವ ಅದೇ ಸಲಹೆಯನ್ನು, ಸಾವಿರದ ನಾನೂರು ವರ್ಷಗಳ ಹಿಂದೆಯೇ ನಬಿ(ಸ) ನೀಡಿದ್ದರು. ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಸರಳ ಜೀವನದಿಂದ ಜನರು ಕಷ್ಟಗಳನ್ನು ಸಹಿಸಿಕೊಳ್ಳುವ ಅಭ್ಯಾಸವನ್ನು ಹೊಂದಬಹುದು ಮತ್ತು ಕಷ್ಟದ ದಿನಗಳಲ್ಲೂ ಅವರಿಗೆ ಕಷ್ಟದ ಅನುಭವವಾಗದು. ಇಂದಿನ ದಿನಗಳಲ್ಲಿ ನಾವು ನೋಡುತ್ತಿರುವಂತೆ, ಯುರೋಪ್‌ನವರ ದೃಷ್ಟಿಯಲ್ಲಿ ಯಾವುದು ಕಷ್ಟಗಳಾಗಿವೆಯೋ, ಅದು ನಮ್ಮ ದಿನನಿತ್ಯದ ಜೀವನದ ಭಾಗವಾಗಿದೆ. ಅವರು ಯಾವುದನ್ನು ವಿಪತ್ತು ಮತ್ತು ಕಷ್ಟವೆಂದು ಭಾವಿಸುತ್ತಾರೋ, ಅದು ನಮ್ಮ ದೃಷ್ಟಿಯಲ್ಲಿ ನೆಮ್ಮದಿ ಮತ್ತು ಆರಾಮವಾಗಿದೆ. ಹಾಗಾಗಿ, ಆ ಕಷ್ಟಗಳು ನಮಗೆ ಗೊತ್ತಾಗುವುದೇ ಇಲ್ಲ. ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಕೆಲವು ದಿನಗಳ ಹಿಂದೆ ಕೆಲವರು ನನ್ನೊಡನೆ, 'ಬಟ್ಟೆ ಸಿಗುವುದು ಕಷ್ಟವಾಗುತ್ತಿದೆ' ಎಂದು ಹೇಳಿದರು. ಆದರೆ ಒಬ್ಬ ಸತ್ಯವಿಶ್ವಾಸಿಯ ಸ್ಥಿತಿ ಹೇಗಿರುತ್ತದೆಯೆಂದರೆ, ಬಟ್ಟೆ ಸಿಕ್ಕರೆ ಧರಿಸುತ್ತಾನೆ, ಸಿಗದಿದ್ದರೆ ಹಳೆಯ ಬಟ್ಟೆಗೆ ತೇಪೆ ಹಾಕಿ ಜೀವನ ಸಾಗಿಸುತ್ತಾನೆ. ನಬಿ(ಸ)ರ ಬಟ್ಟೆಗಳಿಗೆ ತೇಪೆಗಳಿರುತ್ತಿದ್ದವು. ನಾವು ಅವರಿಗಿಂತ ದೊಡ್ಡವರೇ? ನಾವು ನಮ್ಮ ಬಟ್ಟೆಗಳಿಗೆ ತೇಪೆ ಹಾಕಲು ಸಾಧ್ಯವಲ್ಲವೇ?

(ಹುಝೂರ್ ಹೇಳಿದರು:) ಲೋಕದ ಇತ್ತೀಚಿನ ಕಷ್ಟಗಳಲ್ಲಿ, 'ಅದು ಸಿಗುತ್ತಿಲ್ಲ, ಇದು ಸಿಗುತ್ತಿಲ್ಲ' ಎಂಬ ಕೂಗು ಎದ್ದಿದೆ; ಜಾಗತಿಕ ಯುದ್ಧ ಪ್ರಾರಂಭವಾದರೆ, ಪರಿಸ್ಥಿತಿ ಇನ್ನೆಷ್ಟು ಹದಗೆಡುವುದು ಎಂದು ಗೊತ್ತಿಲ್ಲ. ನಾನು ಈ ಹಿಂದೆಯೂ ಅನೇಕ ಬಾರಿ ಹೇಳಿದ್ದೇನೆ, ಯುದ್ಧದ ವಾತಾವರಣ ಹೆಚ್ಚಾಗುತ್ತಿದೆ ಮತ್ತು ಇನ್ನಷ್ಟು ಯುದ್ಧ ನಡೆದರೆ, ಯುರೋಪ್ ಹಾಗೂ ಇಡೀ ಲೋಕವು ಆಹಾರದ ವಿಷಯದಲ್ಲಿ ಕಷ್ಟಕರವಾದ ಕಾಲಘಟ್ಟವನ್ನು ಎದುರಿಸಬೇಕಾಗುವುದು.

ಹಝ್ರತ್ ಮುಸ್ಲಿಹ್ ಮೌಊದ್(ರ) ಅಂದಿನ ಭಾರತದ ಉದಾಹರಣೆಯನ್ನು ನೀಡಿದ್ದಾರೆ, ಆದರೆ ಆಫ್ರಿಕಾ ಮತ್ತು ಕಡಿಮೆ ಅಭಿವೃದ್ಧಿ ಹೊಂದಿರುವ ದೇಶಗಳ ಸ್ಥಿತಿ ಹೇಗಿದೆಯೆಂದರೆ, ಅವರಿಗೆ ಸಾಮಾನ್ಯ ಆಹಾರ ಸಿಕ್ಕರೆ ಕೂಡ ಬಹಳ ಸಂತೋಷಪಡುತ್ತಾರೆ. ಆ ಜನರು ಯುದ್ಧದ ಪರಿಸ್ಥಿತಿಯನ್ನು ಸಹಿಸಿಕೊಳ್ಳುವರು, ಆದರೆ ಯುರೋಪ್ ಮತ್ತು ಈ ಅಭಿವೃದ್ಧಿ ಹೊಂದಿದ ದೇಶಗಳಿಗೆ ಸಹಿಸಿಕೊಳ್ಳಲು ಸಾಧ್ಯವಿಲ್ಲ, ಈ ಪರಿಸ್ಥಿತಿಯು ಅವರನ್ನು ಅತ್ಯಂತ ಹೆಚ್ಚು ತೊಂದರೆಗೆ

ಈಡುಮಾಡುವುದು. ಹಾಗಾಗಿ ನಾವು ಕೂಡ ನಮ್ಮ ಸ್ಥಿತಿಯನ್ನು ಗಮನಿಸಬೇಕು ಮತ್ತು ಇದ್ದುದರಲ್ಲಿ ತೃಪ್ತಿಪಡುವ ಗುಣವನ್ನು ಅಳವಡಿಸಿಕೊಳ್ಳಬೇಕು. ಸರಳ ಜೀವನ ನಡೆಸಲು ಪ್ರಯತ್ನಿಸಬೇಕು. ನಬಿ(ಸ)ರ ಮಾದರಿಯನ್ನು ಮತ್ತು ಆ ಕಾಲವನ್ನು ಮುಂದಿಟ್ಟುಕೊಳ್ಳಬೇಕು. ಉತ್ತಮ ವಸ್ತುಗಳು, ಊಟ ಲಭ್ಯವಿದ್ದರೆ ಖಂಡಿತವಾಗಿಯೂ ತಿನ್ನಿರಿ. ಉತ್ತಮ ವಸ್ತುಗಳು ಲಭ್ಯವಿದ್ದರೆ ಖಂಡಿತವಾಗಿಯೂ ಧರಿಸಿರಿ. ಆದರೆ ಅವುಗಳ ಮೇಲೆಯೇ ಅವಲಂಬಿತರಾಗುವುದು, ಸಿಗದಿದ್ದರೆ 'ನಾವು ಸತ್ತು ಹೋಗುವೆವು' ಎಂದು ಕೂಗಾಡುವುದು ತಪ್ಪು. ಒಟ್ಟಿನಲ್ಲಿ, ಅಲ್ಲಾಹನು ಲೋಕವನ್ನು ಈ ವಿಪತ್ತುಗಳಿಂದ ರಕ್ಷಿಸಲಿ ಎಂದು ದುಆ ಸಹ ಮಾಡಬೇಕು. ತಮ್ಮ ಅಹಂಕಾರದಿಂದಾಗಿ ಇವರು ನಾಶದ ಪ್ರಪಾತಕ್ಕೆ ಬೀಳುತ್ತಿದ್ದಾರೆ. ಇದೇ ಪರಿಸ್ಥಿತಿ ಮುಂದುವರಿದರೆ, ಮಹಾಯುದ್ಧವು ನಿಶ್ಚಿತ ಮತ್ತು ಅವರ ನಾಶವೂ ನಿಶ್ಚಿತ. ಇತರರ ಸಂಪತ್ತು ಮತ್ತು ಭೂಮಿಯನ್ನು ವಶಪಡಿಸಿಕೊಳ್ಳುವ ಬದಲಿಗೆ, ಈ ಜನರು ತಮ್ಮ ಪ್ರಜೆಗಳ ಸೇವೆಯನ್ನು ಮಾಡಬೇಕು.

ಅಲ್ಲಾಹನು ನಮಗೂ ಸತ್ಕಾರ್ಯಗಳ ಮೇಲೆ ನೆಲೆನಿಲ್ಲುವ ಸೌಭಾಗ್ಯವನ್ನು ದಯಪಾಲಿಸಲಿ.

----------*****----------

اَلْحَمْدُلِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَاهَادِيَ لَهٗ ، وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُاَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُبِالْعَدْلِ وَالْاِحْسَانِ وَاِيْتَاءِ ذِى الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ٥اُذْكُرُواللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.

Friday Sermon delivered by Hazrat Khalifatul Masih Al Khamis(atba)

At, ***'Masjid Mubarak',*** *Islamabad, Tilford,* U.K. On 30-10-2026

Summarized by *Majlis Ansarullah Bharat*

Kannada Translation: Moulavi Inamullah for Kannada Desk, Qadian

Reviewed by: M.P Ibrahim | ***Layout:*** Basheer K.P. Manjeshwar

Published By: Kannada Isha'at Team for Nazarath Nashr-O-Isha'ath, Qadian

Email*: *khutuba.kannada@gmail.com

You can find all the Sermons archived at: www.alislam.org/friday-sermon